ಸಿನಿಮಾ ನಿರ್ದೇಶನ ಮಾಡಿದ್ದೇನೆ. ಹೊಸ ಹೊಸ ಅನುಭವಗಳನ್ನು ಸಿನಿಮಾ ನೀಡಿದೆ. ಸಾಕಷ್ಟು ಜನರ ಸಹಕಾರವೂ ಸಿಕ್ಕಿದೆ.

◆ **‘ಡೇರ್‌ಡೆವಿಲ್ ಮುಸ್ತಫಾ’ ಮೂಲಕ ಏನು ಹೇಳಲು ಹೊರಟಿದ್ದೀರಿ?**

ಒಳ್ಳೆ ಮನರಂಜನೆ ಕೊಡಬೇಕೆಂಬ ಆಶಯ ಈ ಸಿನಿಮಾದ್ದು. ಸಾಹಿತ್ಯ ಕಥೆ ಆಧರಿತ ಸಿನಿಮಾ ಎಂದರೆ, ತುಂಬಾ ಗಂಭೀರವಾಗಿರುತ್ತದೆ, ಅದು ಬರೀ ಸಾಹಿತ್ಯಾಸಕ್ತರಿಗೆ, ಅಧ್ಯಯನಶೀಲರಿಗೆ ಎಂಬ ಆಲೋಚನೆಯಿದೆ. ಅದನ್ನು ಸ್ವಲ್ಪ ಬದಲಿಸಬೇಕಿದೆ. ತೇಜಸ್ವಿ ಅವರು ಜನಪ್ರಿಯ ಆಗಿದ್ದೇ, ಅವರು ಜನಸಾಮಾನ್ಯರಿಗೆ ಅರ್ಥವಾಗುವಂತೆ ಕಥೆ ಬರೆಯುತ್ತಿದ್ದ ಕಾರಣಕ್ಕೆ. ತುಂಬಾ ಗಂಭೀರ ವಿಷಯಗಳನ್ನು ಮಜಮಜವಾಗಿ ಹೇಳುತ್ತಾ ಹೋಗುವುದೇ ಅವರ ವಿಶೇಷತೆ. ಹಾಗಾಗಿ ಸಿನಿಮಾದಲ್ಲಿ ಕೂಡ ಅದೇ ಆಶಯವನ್ನು ನಿರೂಪಿಸಲು ಹೊರಟಿದ್ದೇವೆ. ಜನರನ್ನು ಒಳ್ಳೆ ರೀತಿ ರಂಜಿಸುವುದು ನಮ್ಮ ಆದ್ಯತೆ.

ಕಾಲೇಜು ಜೀವನ, ಹುಡುಗ ಹುಡುಗಿ, ಫ್ರೆಂಡ್‌ಶಿಪ್ಪು, ಲವ್ ಸ್ಟೋರಿ, ರಾಜಕೀಯ, ಹುಡುಗರ ಜಗಳ, ಇಂಥವೇ ಸಣ್ಣಪುಟ್ಟ ಮಜವಾದ, ತಾಜಾ ಸಂಗತಿಗಳ ಒಟ್ಟು ಸಂಕಲನ ಈ ಸಿನಿಮಾ. ತೇಜಸ್ವಿ ಅವರ ‘ಲೈನ್ ಆಫ್ ಥಾಟ್’, ಅಂದರೆ ಜನಸಾಮಾನ್ಯರಿಗೆ ಒಂದಷ್ಟು ವಿಷಯಗಳನ್ನು, ಅವರಿಗೆ ಕಾಟ ಎನಿಸದಂತೆ ಖುಷಿಯಾಗಿ ಕೊಡುವ ಆಲೋಚನೆಯನ್ನು ಸಿನಿಮಾಗೆ ಇಳಿಸಲು ಪ್ರಯತ್ನಿಸಿದ್ದೇವೆ.

◆ **ನಿಮ್ಮ ಚೊಚ್ಚಲ ಸಿನಿಮಾ ಕುರಿತ ನಿಮ್ಮದೇ ನಿರೀಕ್ಷೆಗಳು?**

ನಮ್ಮ ವಿಚಾರ ಅಥವಾ ಕಥೆಯನ್ನು ಮನರಂಜನೆಯಾಗಿ, ಒಳ್ಳೆ ರೀತಿಯಲ್ಲಿ ನೀಡಬೇಕು. ಚಿತ್ರ ಕಲಾವಿದನಿಗೆ ಮಾಧ್ಯಮ ಕ್ಯಾನ್ವಾಸ್. ಸಿನಿಮಾ ಕಲಾವಿದನಿಗೆ ಸಿನಿಮಾನೇ ಕ್ಯಾನ್ವಾಸ್. ಈ ಸಿನಿಮಾ ಬಗ್ಗೆ ನನ್ನ ನಿರೀಕ್ಷೆ ಹೇಳಿದರೆ ವಾಚ್ಯ ಎನಿಸಬಹುದು. ಸಿನಿಮಾ ನೋಡಿಯೇ ಅದನ್ನು ತಿಳಿಯಬೇಕು.

ಆದರೆ ಈ ಸಿನಿಮಾ ಅಥವಾ ಇಂಥದ್ದೇ ಭಿನ್ನ ಪ್ರಯತ್ನದ ಸಿನಿಮಾಗಳು ತುಂಬಾ ಜನರನ್ನು ತಲುಪಬೇಕು. ಕಥೆಯೊಂದು ಪುಸ್ತಕದ ಮುಖಾಂತರ ಐದು ಲಕ್ಷ ಜನರನ್ನು ತಲುಪಿದ್ದರೆ, ಸಿನಿಮಾ ಎಂಬ ದೊಡ್ಡ ಮಾಧ್ಯಮ ಅದನ್ನು ಕನಿಷ್ಠಪಕ್ಷ 10–15 ಲಕ್ಷ ಜನರಿಗೆ ಮುಟ್ಟಿಸಿದಾಗಲೇ ಸಾರ್ಥಕತೆ. ಜೊತೆಗೆ ಇಂಥ ಸಿನಿಮಾಗಳು ದುಡ್ಡು ಮಾಡಬೇಕು. ಅದು ದೊಡ್ಡ ಮಟ್ಟದ ನಿರೀಕ್ಷೆ. ಏಕೆಂದರೆ, ಈ ರೀತಿಯ ಸಿನಿಮಾಗಳು ದುಡ್ಡು ಮಾಡಿಲ್ಲ ಎಂದರೆ ಇಂಥ ಪ್ರಯತ್ನಗಳೂ ಅಲ್ಲಿಗೇ ಕೊನೆಯಾಗಿಬಿಡುತ್ತವೆ. ಮತ್ತೊಂದು ಸಿನಿಮಾ ಆಗೋದೇ ಇಲ್ಲ. ಒಳ್ಳೆ ಅಭಿರುಚಿಯ ಮನರಂಜನೆ ಹಣ ಗಳಿಸುವಲ್ಲಿ ಸೋತರೆ, ಮತ್ತೆ ಒಳ್ಳೆಯ ಮನರಂಜನೆ ಸಿಗಲ್ಲ. ಹೀಗಾಗಿ ನಮ್ಮ ಕೈ ಮೀರಿ ಹಲವು ಪ್ರಯತ್ನಗಳನ್ನು ಸಿನಿಮಾದಲ್ಲಿ ಮಾಡಿದ್ದೇವೆ. ಅದು ಫಲಿಸುವ ನಿರೀಕ್ಷೆಯೂ ಇದೆ. ■

# ರೀಷ್ಮಾ ವಿಭಿನ್ನ KD ಮ್ಯಾನರಿಸಂ



‘ನನ್ನ ನಟನಾ ಸಾಮರ್ಥ್ಯ ನಿರೂಪಿಸಲು ನನಗೊಂದು ಒಳ್ಳೆ ಅವಕಾಶ ಸಿಕ್ಕಿದೆ. ಈ ಪಾತ್ರ ಅದಕ್ಕೆ ಸಹಾಯ ಮಾಡಲಿದೆ. ನನಗೆ ಇದುವರೆಗೂ ಸಿಕ್ಕಿರುವ ಪಾತ್ರಗಳಲ್ಲಿ ಇದು ಕಷ್ಟಕರವಾಗಿದ್ದರೂ ಒಂದೊಳ್ಳೆ ಅವಕಾಶವಂತೂ ಹೌದು...’ ನಟಿ ರೀಷ್ಮಾ ನಾಣಯ್ಯ ತಮಗೆ ಸಿಕ್ಕಿರುವ ಹೊಸ ಪಾತ್ರವೊಂದರ ಕುರಿತು ಉತ್ಸಾಹದಿಂದ ಮಾತನಾಡಿದ್ದಾರೆ.

ರೀಷ್ಮಾಗೆ, ನಿರ್ದೇಶಕ ಪ್ರೇಮ್ ಜೊತೆಗಿನ ಎರಡನೇ ಸಿನಿಮಾ ಇದು. ಪ್ರೇಮ್ ನಿರ್ದೇಶನದಲ್ಲಿ, ನಟ ಧ್ರುವ ಸರ್ಜಾ ಜೊತೆಗೆ ‘KD –ದಿ ಡೆವಿಲ್’ ಸಿನಿಮಾದಲ್ಲಿ ಮಚ್‌ಲಕ್ಷ್ಮಿಯಾಗಿ ರೀಷ್ಮಾ ನಾಣಯ್ಯ ಕಾಣಿಸಿಕೊಳ್ಳುತ್ತಿದ್ದಾರೆ. ಈಚೆಗೆ ರೀಷ್ಮಾ ಹುಟ್ಟುಹಬ್ಬದ ದಿನ ಸಿನಿಮಾದ ಫಸ್ಟ್ ಲುಕ್ ಅನ್ನೂ ಬಿಡುಗಡೆಗೊಳಿಸಿದ್ದು, ಅದರಲ್ಲಿ ಅವರನ್ನು ತುಂಬಾ ಭಿನ್ನವಾಗಿ ಬಿಂಬಿಸಲಾಗಿದೆ. ಈ ಪೋಸ್ಟರ್‌ಗೆ ಒಳ್ಳೆ ಪ್ರತಿಕ್ರಿಯೆ ಸಿಕ್ಕಿದ್ದು, ರೀಷ್ಮಾ ಹೊಸ ಲುಕ್, ಈ ಸಿನಿಮಾ ಬಗ್ಗೆಯೂ ನಿರೀಕ್ಷೆಗಳನ್ನು ಹುಟ್ಟುಹಾಕಿದೆಯಂತೆ.

ಸಿನಿಮಾ ಚಿತ್ರೀಕರಣ ಆರಂಭಕ್ಕೂ ಮುನ್ನ ಸಾಕಷ್ಟು ಸ್ಕ್ರೀನ್ ಟೆಸ್ಟ್‌ಗಳನ್ನೂ ಪ್ರೇಮ್ ಮಾಡಿಸಿದ್ದಾರೆ. ‘ರೀಷ್ಮಾ ತುಂಬಾ ಪ್ರೊಫೆಷನಲ್ ಆಗಿದ್ದಾರೆ. ಅವರನ್ನು ಬೇರೆಯದೇ ಲುಕ್‌ನಲ್ಲಿ ತೋರಿಸಬೇಕಿದೆ. ಹೀಗಾಗಿ ಸುಮಾರು 50 ಕಾಸ್ಟ್ಯೂಮ್‌ಗಳಲ್ಲಿ ಪರೀಕ್ಷೆ ಮಾಡಿದೆವು. ಅವರ ಲುಕ್ ಅಂತಿಮಗೊಳಿಸಲು ನಾಲ್ಕು ತಿಂಗಳು ತೆಗೆದುಕೊಂಡಿದ್ದೇವೆ. 70ರ ದಶಕದ ಹೀರೊಯಿನ್‌ಗಳ ಮ್ಯಾನರಿಸಂ ಅನ್ನು ಅಭ್ಯಾಸ ಮಾಡಿಸಲಾಗಿದೆ’ ಎಂದು ಹೇಳಿದ್ದಾರೆ ಪ್ರೇಮ್.

‘ಏಕ್ ಲವ್ಯಾ’ ಸಿನಿಮಾ ಮೂಲಕ ಪ್ರೇಮ್, ರೀಷ್ಮಾ ಅವರನ್ನು ಸಿನಿಮಾ ರಂಗಕ್ಕೆ ಪರಿಚಯಿಸಿದ್ದರು. ಇದೀಗ ಮತ್ತೆ ಅವರ ನಿರ್ದೇಶನದ ಸಿನಿಮಾದಲ್ಲಿ ಅವಕಾಶ ಸಿಕ್ಕಿದ್ದಕ್ಕೆ ರೀಷ್ಮಾ ಖುಷಿಯಾಗಿದ್ದಾರೆ. ಕೆವಿಎನ್ ಪ್ರೊಡಕ್ಷನ್ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಈಗಾಗಲೇ 15 ದಿನದ ಚಿತ್ರೀಕರಣ ಮುಗಿದಿದೆ.

‘ನನ್ನ ಕೆರಿಯರ್‌ನ ಆರಂಭಿಕ ದಿನಗಳಲ್ಲಿಯೇ ನನಗೆ ಒಳ್ಳೆ ಪಾತ್ರಗಳು ದಕ್ಕುತ್ತಿರುವುದಕ್ಕೆ ಖುಷಿಯಾಗಿದೆ. ಈ ಒಂದು ಪಾತ್ರ ನನ್ನ ಸಾಮರ್ಥ್ಯವನ್ನು ಪರೀಕ್ಷಿಸಲಿದೆ. ಈ ಪಾತ್ರದ ಇಂಚಿಂಚನ್ನೂ ಆವರಿಸಿಕೊಳ್ಳಲು ನಾನು ಇನ್ನೂ ಶ್ರಮಪಟ್ಟು ಕೆಲಸ ಮಾಡಬೇಕಿದೆ’ ಎಂದು ಹೇಳಿದ್ದಾರೆ ರೀಷ್ಮಾ. ■